Reg No B G 155 ಶಿ 9 — 5 — 72

55th Year of Publication ✱ 'Satyavadi' Daily, Mysore 4

Doc-475
T.P.2

In the State - The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸೆರವೇರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಜೂನ್ 10 ರ ನಂತರ ಉನ್ನತ ಮಟ್ಟದ ಸಮ್ಮೇಳನ

ಚಾರ್ಲಿ ಚಾಪ್ಲಿನ್

ಲಾಸ್ ಏಂಜೆಲ್ಸ್— 20 ವರ್ಷಗಳ ನಂತರ ಪ್ರಪ್ರಥಮವಾಗಿ ಸ್ಯೂಯಾರ್ಕಿಗೆ ಭೇಟಿ ಕೊಡಲಿರುವ ವಿಶ್ವ ಪ್ರಖ್ಯಾತ ಹಾಸ್ಯ ನಟ ಚಾರ್ಲಿ ಚಾಪ್ಲಿನ್ನಿನ ಜೀವಹರಣ ಬೆದರಿಕೆ ಪತ್ರಗಳು ಬಂದಿರುವುದರಿಂದ ಅಲ್ಲಿ ಅವರು ಇರುವ ನಾಲ್ಕು ದಿನಗಳಲ್ಲಿ ಅವರಿಗೆ ಭದ್ರವಾದ ಪೋಲೀಸು ಕಾವಲು ಏರ್ಪಡಿಸಲಾಗಿದೆ.

●

ಮುನಿಸಿಪಲ್ ಕೌನ್ಸಿಲರುಗಳ ದಸ್ತಗಿರಿ

ಅಹಮದಾಬಾದು— ಇಬ್ಬರು ಮುನಿಸಿಪಲ್ ಕೌನ್ಸಿಲರುಗಳನ್ನು ಪಾನನಿರೋಧ ಸಂಬಂಧದ ತಕ್ಸೀರಿಗಾಗಿ ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡಲಾಯಿತು.

★

ಡಾ ॥ ಮೋದಿ

ನೇತ್ರದಾನಿ ಪದ್ಮಭೂಷಣ ಡಾ॥ ಎಂ. ಸಿ. ಮೋದಿಯವರು (ರಾಷ್ಟ್ರಾಧ್ಯಕ್ಷರ ಗೌ॥ ನೇತ್ರ ವೈದ್ಯರು) ಬೆಳಗಾಂನಲ್ಲಿ ಬೆರ್ನ್ ಸ್ಮಿತ್ ಹೈಸ್ಕೂಲಿನಲ್ಲಿ ತಾ ॥ 19 ರಂದು ಉಚಿತ ನೇತ್ರ ಆಪರೇಷನ್ ಶಿಬಿರವನ್ನು ನಡೆಸುವರು.

★

ಹಿಂದೀ ವರ್ಗಗಳು

ಮೈಸೂರು— ಮೈಸೂರು ಜಿಲ್ಲಾ ಹಿಂದೀ ಪ್ರಚಾರ ಸಮಿತಿ ಆಶ್ರಯದಲ್ಲಿ, ಆಗಸ್ಟ್ 1972 ರಲ್ಲಿ ನಡೆಯುವ ಮದರಾಸಿನ ಹಿಂದೀ ಪ್ರಚಾರ ಸಭೆಯ ಪ್ರಾಥಮಿಕದಿಂದ ಪ್ರವೀಣ ವರೆಗೆ ಹಿಂದೀ ವರ್ಗಗಳನ್ನು ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಮಹಾರಾಣಿ ಪಕ್ಕಾ ಮಿಡಲ್ ಸ್ಕೂಲಿನಲ್ಲಿ (ಮಹಾರಾಣಿ ಕೈಸ್ಕೂಲ್ ಒಳಗೆ) ತೆರೆಯಲಾಗಿದೆ ಮತ್ತು ಪ್ರವೇಶಗಳನ್ನು ಸ್ವೀಕರಿಸಲಾಗುತ್ತಿದೆ.

ಬಹು ಬೆಲೆಯ ಅಂಚೇಚೀಟಿ

ಪಶ್ಚಿಮ ಜರ್ಮನಿಯ ಹ್ಯಾಂಬರ್ಗಿನಲ್ಲಿ ಹರಾಜಾದ ಒಂದು ಅಂಚೇಚೀಟಿಗೆ 25200 ಜರ್ಮನ್ ಮಾರ್ಕ್ ಹಣ ದೊರೆಯಿತು— ಆ ಅಂಚೇಚೀಟಿ ರಕ್ಷಣೆಗಾಗಿ ಬಲವಾದ ಪೋಲೀಸು ಕಾವಲು ಏರ್ಪಟ್ಟಿದ್ದಿತು

★

ಒಲಂಪಿಕ್ಸ್

ಪಶ್ಚಿಮ ಜರ್ಮನಿಯ ಮ್ಯೂನಿಕ್ ನಗರದಲ್ಲಿ ನಡೆಯುವ ಒಲಂಪಿಕ್ ಕ್ರೀಡೆಗಳಿಗೆ ಈಗಾಗಲೇ 2 2 ಮಿಲಿಯ ಟಿಕೀಟುಗಳ ಮಾರಾಟವಾಗಿದೆ.

●

ಹಿಮಾಲಯದ ದೇವಾಲಯಗಳು

ನಂದಪ್ರಯಾಗ (ಚಮೋಲಿ)— ಉತ್ತರಖಂಡಿನ ಎಲ್ಲಾ ದೇವಾಲಯಗಳೂ, ಅಂದರೆ, ಬದ್ರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ ದೇವಾಲಯಗಳೂ ತಾ ॥ 15 ರಂದು ತೆರೆಯಲಾಗುವುದು.

●

ಸಕ್ಕರೆ ಉತ್ಪಾದನೆ

ನವದೆಹಲಿ— ಈ ವರ್ಷ ಸಕ್ಕರೆ ಉತ್ಪಾದನೆ 650000 ಟನ್ ಕಡಮೆಯಾಗುವ ನಿರೀಕ್ಷೆ ಇದೆಯೆಂದು ದಕ್ಷಿಣ ಭಾರತ ಸಕ್ಕರೆ ಗಿರಣಿ ಸಂಘದ ಉಪಾಧ್ಯಕ್ಷ ಶ್ರೀ ಮಾರುತ್ಯಾ ಪಿಳ್ಳೆ ಹೇಳಿದರು.

★

ಹೊಸ ಹೋಟಲು ಪ್ರಾಜೆಕ್ಟುಗಳು

ನವದೆಹಲಿ— 71-72 ರ ಕಡೆಯಲ್ಲಿ ದೇಶದ ವಿವಿಧ ಭಾಗಗಳಲ್ಲಿ ನಿರ್ಮಾಣದ ವಿವಿಧ ಹಂತದಲ್ಲಿ 70 ಹೊಸ ಹೋಟಲು ಪ್ರಾಜೆಕ್ಟುಗಳಿವೆಯೆಂದು ಪ್ರವಾಸ ಸಚಿವಾಲಯದ ವಾರ್ಷಿಕ ವರದಿ ತಿಳಿಸುತ್ತದೆ.

ಪಾಕ್-ಭಾರತ ಉನ್ನತಮಟ್ಟದ ಸಮ್ಮೇಳನ

ನವದೆಹಲಿ— ಭುಟ್ಟೋ-ಇಂದಿರಾರವರ ಉನ್ನತ ಮಟ್ಟದ ಸಮ್ಮೇಳನವು ಜೂನ್ 10 ರ ನಂತರವೇ ನಡೆಯಬೇಕಾಗಿದೆ — ಭುಟ್ಟೋರು ತಾವು ತಾ॥ 29 ರಂದು 12 ದಿನಗಳ ವಿದೇಶೀ ಪ್ರವಾಸ ಕೈಗೊಳ್ಳುವುದಾಗಿದ್ದು ಯುದ್ಧ ಕಾಲದಲ್ಲಿ ಪಾಕಿಸ್ತಾನಕ್ಕೆ ನೆರವು ನೀಡಿದವರ ಸಲಹೆ ಪಡೆಯಬೇಕಾಗಿದೆಯೆಂದೂ ಹೇಳಿದ್ದಾರೆ.

★

ಅಪಾರ ಬೆಳೆ ನಷ್ಟ

ಗೌಡಿಬಂಚ— ಗೌರಿಬಿದನೂರು ತಾಲ್ಲೋಕಿನ ವಟದಹೊಸಹಳ್ಳಿ ಮತ್ತು ಮಣಿವಾಲಾ ಕೆರೆಗಳ ಕೆಳಗಿನ ಭೂಮಿಗೆ ನೀರಿಲ್ಲದೆ ಅಲ್ಲಿಯ ರೂ 4 ಲಕ್ಷ ಬೆಲೆಯ ಭತ್ತದ ಪೈರು ನಾಶವಾಗಿದೆ.

★

ಪಾಕ್ ಯುದ್ಧ ಖೈದಿಗಳು

ಡಾಕಾ— 1500 ಪಾಕಿಸ್ತಾನ ಮಿಲಿಟರಿ ಜನರ ಮೇಲೆ ಬಂಗ್ಲಾ ಸರಕಾರವು ಸಾಕ್ಷ್ಯ ಪತ್ರಗಳ ಮತ್ತು ದೂರುಗಳನ್ನ ನುಸರಿಸಿ ವಿಚಾರಣೆಗೆ ಏರ್ಪಡಿಸುತ್ತಿದೆ.

○

ರೇಷ್ಮೆ ಹೆಚ್ಚಿಸಲು

ನವದೆಹಲಿ— ಮುಂದಿನ 10 ವರ್ಷಗಳಲ್ಲಿ ಕಚ್ಚಾ ರೇಷ್ಮೆಯನ್ನು ವರ್ಷಕ್ಕೆ 18 ಲಕ್ಷ ಕೆಜಿಯಿಂದ 36 ಲಕ್ಷ ಕೆಜಿಗೆ ಹೆಚ್ಚಿಸಲು ಮೈಸೂರಿನ ರೂ 80 ಕೋಟಿ ಯೋಜನೆಗೆ ಕೇಂದ್ರದ ಅನುಮತಿ ದೊರೆತಿದೆ.

○

ದಿವ್ಯವಾಣಿ

ನೀನು ಒಬ್ಬ ಹೇಡಿಯಾಗಿರದೆ ವೀರನಾಗಲಾ? ಬರ್ನರ್ಡ್ ಷಾ

★

ಇದಕ್ಕೂ ಪ್ರಧಾನಿಯವರು

ನವದೆಹಲಿ— ಭೂ ಪರಿಮಿತಿ ವಾಗ್ದಾದ ಪರಿಹಾರವಾಗದೇ, ಪ್ರಧಾನಿಯವರಿಗೇ ಒಪ್ಪಿಸಲು ನಿರ್ಧರಿಸಲಾಯಿತು.

○

ಪರಿಮಿತಿ ವಿನಾಯಿತಿಗೆ ಸಲಹೆ

ಬೆಂಗಳೂರು— ಮತೀಯ, ಧರ್ಮಾರ್ಥ ಮತ್ತು ವಿದ್ಯಾ ಸಂಸ್ಥೆಗಳ ಪ್ರತಿನಿಧಿಗಳು, ಅವುಗಳಿಗೆ ಭೂ ಪರಿಮಿತಿ ಮತ್ತು ಪಟ್ಟಣದ ಆಸ್ತಿ ಪರಿಮಿತಿಯಿಂದ ವಿನಾಯಿತಿ ಹೊಂದಬೇಕೆಂದು ಸಲಹೆ ಮಾಡಿದ್ದಾರೆ.

★

ಅರಸ್‌ರವರ ನುಡಿ

ಮಂಡ್ಯ— ಸಮಾಜವಾದವು ನೈಜವಾಗಿ ಕಾರ್ಯರೂಪಕ್ಕೆ ತರಲ್ಪಡದಿದ್ದರೆ ಪ್ರಜಾಪ್ರಭುತ್ವವು ಸಾಯುವುದೆಂದು ಮುಖ್ಯ ಮಂತ್ರಿ ಶ್ರೀ ದೇವರಾಜೆಅರಸ್‌ರವರು ಹೇಳಿದರು.

○

ಖೈದಿಗಳ ದಾಂಧಲೆ

ಪಾಟ್ನಾ— ಭಾಗಲ್ಪುರ ಜೈಲಿನಲ್ಲಿಡಲಾಗಿರುವ ಸತ್ಯಾಗ್ರ ಹಿ ಹೆಮಿಯೋಪತಿ ವಿದ್ಯಾರ್ಥಿಗಳ ಮೇಲೆ ಅಲ್ಲಿರುವ ಖೈದಿಗಳು ಭೀಕರ ಕೈಮಾಡುವುದನ್ನು ತಪ್ಪಿಸಲು ಪೋಲೀಸರು ಬಂದಾಗ ಅವರ ಮೇಲೂ ಕೈಮಾಡಿದ್ದರಿಂದ ಪೋಲೀಸರು ಗೋಳೀಬಾರು ಮತ್ತು ಲಾಠಿ ಛಾರ್ಜು ಮಾಡಿದರು; 9 ಖೈದಿಗಳು ಸತ್ತು 150 ಮಂದಿ ಗಾಯಗೊಂಡರು.

★

ಬೆಲೆ ಏರುತ್ತಿದೆ

ಡಾಕಾ— ಬಂಗ್ಲಾದೇಶದಲ್ಲಿ ಅಕ್ಕಿ, ಸಕ್ಕರೆ ಮತ್ತು ಸೀಮೆಎಣ್ಣೆ ಸೇರಿ ಎಲ್ಲಾ ನಿತ್ಯ ಬಳಿಕೆ ಪದಾರ್ಥಗಳ ಬೆಲೆಯು ಏರುತ್ತಿದೆ!

ರೈತ ಮತ್ತು ಕಾರ್ಮಿಕ ಸೇವಾ ಸಂಘ

ಮೈಸೂರು ರಾಜ್ಯದಲ್ಲಿ ಜನಾನನ ಕೆಲಸ ಮಾಡುವವನಿಗೆ ಸುಮಾರು ರೂ. 180 ತಿಂಗಳಿಗೆ ದೊರೆಯುತ್ತದೆ ಅಧಿಕಾರಿಗಳಿಗೆ ಸುಮಾರು ರೂ. 2000 ತಿಂಗಳಿಗೆ ದೊರೆಯುತ್ತದೆ. ವೇತನದಲ್ಲಿ ಇಷ್ಟು ಅಂತರವಿದ್ದರೂ, ಸಾಮಾನ್ಯವಾಗಿ ಹೆಚ್ಚು ತುಂಬಲು ಖರ್ಚುವೆಚ್ಚಗಳು ಇಬ್ಬರಿಗೂ ಒಂದೇ ಇರುತ್ತದೆ. ಈ ಕಾರಣದಿಂದ ಜನಾನನಿಗೂ ಹೆಚ್ಚು ವೇತನ ಕೊಡಬೇಕಾದುದು ಸಾಮಾಜಿಕ ನ್ಯಾಯ. ಆದರೆ ಸರ್ಕಾರ ಈ ರೀತಿ ಕೊಡಲು ಸಾಧ್ಯವೇ? ಇದು ಸಾಧ್ಯವಿಲ್ಲವೆಂದಾಗ ಭೂಮಿಯ ಲ್ಲಿ ಜೀವನ ಮಾಡುವ ರೈತನಿಗೆ ಮಿತಿ ಏಕೆ ಹಾಕಬೇಕು? ಈ ದೃಷ್ಟಿಯಿಂದ ಭೂ ಸುಧಾರಣೆ ಕಾನೂನು ತರುವುದೇ ತಪ್ಪು ಎಂದು ಸಂಘದ ಅಧ್ಯಕ್ಷರಾದ ಶ್ರೀ ಕೆ. ಸಿ ಜಂಬೂಗೌತರ ಅಧ್ಯಕ್ಷತೆಯಲ್ಲಿ ಸೇರಿದ್ದ ರೈತ ಮತ್ತು ಕಾರ್ಮಿಕ ಸೇವಾಸಂಘದ ಕಾರ್ಯಕಾರಿ ಸಮಿತಿ ಭೂ ಸಮಸ್ಯೆಯನ್ನು ಕೂಲಂಕುಶವಾಗಿ ಪರಿಶೀಲಿಸಿ, ನಿರ್ಣಯವನ್ನು ಅಂಗೀಕರಿಸಿ, ಭೂ ಮಾಲೀಕರಿಗೆ ಬೇಷರತ್ ಭೂಮಿಯನ್ನು ಕೊಡಿಸಿ ಅವನಿಗೆ ಕಷ್ಟನಷ್ಟಗಳುಂಟಾಗಿರುವುದನ್ನು ತಪ್ಪಿಸಬೇಕೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ, ಕೇಂದ್ರ ರೈಲ್ವೆ ಮಂತ್ರಿ ಶ್ರೀ ಕೆ. ಹನುಮಂತಯ್ಯ, ಮೈಸೂರು ಮುಖ್ಯಮಂತ್ರಿ ಶ್ರೀ ಡಿ ದೇವರಾಜ ಅರಸು, ಕಂದಾಯಮಂತ್ರಿ ಶ್ರೀ ಹುಚ್ಚಮಾಸ್ತಿಗೌಡ ಮತ್ತು ಕೈಗಾರಿಕೆಮಂತ್ರಿ ಶ್ರೀ ಎಸ್. ಎಂ. ಕೃಷ್ಣ ಅವರನ್ನು ಒತ್ತಾಯಪೂರ್ವಕವಾಗಿ ಸ್ವಾಗತಿಸುತ್ತದೆ.

ಸಮಿತಿ ಮತ್ತೊಂದು ನಿರ್ಣಯ ಅಂಗೀಕರಿಸಿ, ಮನೆ ತೆರಿಗೆ ಮೈಸೂರು ನಗರದಲ್ಲಿ ಈಗಾಗಲೇ ವಿಪರೀತ ಹೆಚ್ಚಾಗಿರುವುದರಿಂದ ಕಂದಾಯ ಪುನರ್ವಿಮರ್ಶೆಯನ್ನು ಕೈಬಿಡುವಂತೆ ಸರ್ಕಾರವನ್ನು ಒತ್ತಾಯ ಮಾಡಿದೆ.

Quality Printing Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....

Contribute Liberally

to the National Defence Fund

ವುಡ್‌ಲ್ಯಾಂಡ್ 5 5 72 ರಿಂದ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಿಸಿರುವವರು ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ

ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು: ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಪ್ರತಿ ದಿನ ಬೆಳಿಗ್ಗೆ 11 ರಿಂದ 12 ಘಂಟೆವರೆಗೆ ಬಾಲ್ಕನಿ ತರಗತಿಗಳಿಗೆ ಮುಂಗಡ ಟಿಕೇಟು ಕೊಡಲಾಗುತ್ತೆ.

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಬೆಳ್ಳಿ ಮೋಡ

ಅಪೆರಾ 4 ನೇ ವಾರ

.... ಆತ್ಯಮೋಘ ಕನ್ನಡ ಚಿತ್ರ ....

ಯಾವ ಜನ್ಮದ ಮೈತ್ರಿ

ತಾರಾಗಣ— ಗಂಗಾಧರ್, ಕೆ. ಎಸ್. ಅಶ್ವತ್ಥ್, ಕಲ್ಪನಾ

ಸಂಗೀತ: ವಿಜಯಭಾಸ್ಕರ ಚಿತ್ರಕಥೆ – ನಿರ್ದೇಶನ: ಗೀತಪ್ರಿಯ

SHAKTI

SUDHA

A Superb Tonic

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠ ಪಶ್ಚಾತ್ತಾಪ ಸೊಕ್ಕಿನ' ಕಲ್ಪನೆ '
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರಹರ ಜೊಚ್ಚಲು ಚಿತ್ರ

ಆನೆ – ಹುಡುಗ

Protect the Cow

Edited Printedand Published by Dharmapracharanirata.
M S Krishna Rao (Propretor) at the Satyavadi Press
Chamarajapuram Mysore 4